Date : 12-Nov-2005 Edition : Bangalore Page No.: 9 Page Name: Vanijya- Rashtriya Size: 100%

Sector: IT Circulation: 950000 AVE: Rs.64088.07 Frequency: Daily

Publication: Prajavani Title: World first free computer launched: Asiatotal.net

ಪ್ರಜಾವಾಣಿ

# ವಿಶ್ವದ ಪ್ರಥಮ ಉಚಿತ ಕಂಪ್ಯೂಟರ್: ಏಷ್ಯಾಟೋಟಲ್ ಡಾಟ್ ನೆಟ್ ಪ್ರಕಟಣೆ

**ಪ್ರಜಾವಾಣಿ ವಾರ್ತೆ**

**ಬೆಂಗಳೂರು:** ಕಡಿಮೆ ಆದಾಯ ಇರುವ ವ್ಯಕ್ತಿಗಳು ಮತ್ತು ಸಣ್ಣ ಪ್ರಮಾಣದ ಕಂಪೆನಿ ಹೊಂದಿರುವವರಿಗೆ ವಿಶೇಷವಾಗಿ ಇಂಟರ್‌ನೆಟ್ ಸೌಲಭ್ಯ ಕಲ್ಪಿಸುವ ಕಂಪ್ಯೂಟರ್‌ನ್ನು ಹಾಂಗ್‌ಕಾಂಗ್ ಮೂಲದ ತಂತ್ರಜ್ಞಾನ ಸಂಸ್ಥೆ ಏಷ್ಯಾಟೋಟಲ್ ಡಾಟ್ ನೆಟ್ ಅಭಿವೃದ್ಧಿಪಡಿಸಿದ್ದು, ಇದು ಜಗತ್ತಿನ ಮೊಟ್ಟ ಮೊದಲ ಉಚಿತ ಕಂಪ್ಯೂಟರ್ ಆಗಲಿದೆ ಎಂದು ಸಂಸ್ಥೆ ಹೇಳಿಕೊಂಡಿದೆ.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷೆ ಹಾಗೂ ಮುಖ್ಯ ಕಾರ್ಯನಿರ್ವಾಹಕಿ ಜುಡಿ ಎಸ್.ಚೆನ್ ಈ ಸಂಗತಿ ತಿಳಿಸಿದರು.

ಸಮುದಾಯಗಳ ನಡುವೆ ಇರುವ ತಂತ್ರಜ್ಞಾನದ ಅಂತರವನ್ನು ಕಡಿಮೆ ಮಾಡುವುದು ಮತ್ತು ಆ ಮೂಲಕ ಎರಡೂ ಕಡೆಯಿರುವ ಬಳಕೆದಾರರು ಮತ್ತು ಕಾರ್ಪೊರೇಟ್ ಭಾಗಿದಾರರಿಗೆ ಲಾಭವಾಗುವ ನಿಟ್ಟಿನಲ್ಲಿ ಈ ಐಟಿ ಯೋಜನೆಯನ್ನು ರೂಪಿಸಲಾಗಿದೆ ಎಂದು ಅವರು ವಿವರಿಸಿದರು.

ಶಿಕ್ಷಣ, ವೈದ್ಯಕೀಯ, ಹಣಕಾಸು ಮತ್ತು ಮನೋರಂಜನೆ ಕ್ಷೇತ್ರಗಳಲ್ಲಿನ ಅರ್ಹ ವ್ಯಕ್ತಿಗಳು ಮತ್ತು ಸಣ್ಣ ಉದ್ದಿಮೆದಾರರು ಈ ಯೋಜನೆಯ ಲಾಭ ಪಡೆಯಲಿದ್ದಾರೆ. ಇದು ಸೆಲ್ಫ್ ಫೈನಾನ್ಸಿಂಗ್ ಮಾದರಿಯನ್ನು ಅವಲಂಬಿಸಿದೆ ಎಂದು ಜುಡಿ ಹೇಳಿದರು.

ಮೊದಲ 2 ಲಕ್ಷ ಕಂಪ್ಯೂಟರ್‌ಗಳು ಮುಂದಿನ ಕೆಲ ತಿಂಗಳಲ್ಲಿ ಬ್ರಾಝಿಲ್ ರಾಷ್ಟ್ರಕ್ಕೆ ರವಾನೆಯಾಗಲಿದ್ದು, ಭಾರತಕ್ಕೆ ಇವು ಬರಲು ಇನ್ನು ಸಾಕಷ್ಟು ಸಮಯ ಬೇಕಾಗಬಹುದು ಎಂದು ಅವರು ನುಡಿದರು.

ಈ ಕಂಪ್ಯೂಟರ್‌ಗಳು ನೇರ ಮಾರಾಟಕ್ಕೆ ಲಭ್ಯವಿಲ್ಲ. ಏಷ್ಯಾಟೋಟಲ್ ಡಾಟ್ ನೆಟ್‌ನೊಂದಿಗೆ ಸಹಯೋಗ ಹೊಂದುವ ಕಂಪೆನಿಗಳು ಈ ಕಂಪ್ಯೂಟರ್‌ಗಳನ್ನು ಪಡೆದು ಗ್ರಾಹಕರಿಗೆ ಉಚಿತವಾಗಿ ವಿತರಿಸಬಹುದು. ಆದರೆ, ಭಾರತದಲ್ಲಿ ತಮ್ಮ ಸಂಸ್ಥೆಯೊಂದಿಗೆ ಸಹಯೋಗ ಹೊಂದುವ ಕಂಪೆನಿಗಳ ಹುಡುಕಾಟ ಇನ್ನು ಆರಂಭವಾಗಿಲ್ಲ ಎಂದು ಅವರು ತಿಳಿಸಿದರು.

ಈ ಐಟಿ ಪ್ಯಾಕೇಜ್‌ನಲ್ಲಿ ಒಂದು ಪೋರ್ಟಬಲ್ ಭಾಷಾ ಆಧರಿತ ಪ್ಯಾಕೇಜ್ ಇದ್ದು, ಇದರಲ್ಲಿ ಒಂದು ಮೌಸ್, ಏಳಿಂಚು ಎತ್ತರದ ಎಲ್‌ಸಿಡಿ ಮಾನಿಟರ್, ಎರಡು ಸ್ಪೀಕರ್‌ಗಳು ಮತ್ತು ಇತರೆ ಎಲ್ಲ ಅಗತ್ಯ ಸಾಮಗ್ರಿಗಳು ಇರುತ್ತವೆ ಎಂದು ಅವರು ಹೇಳಿದರು. ಮೇರಿ ಕೊವಾಟ್ಸ್ ಈ ಸಂದರ್ಭದಲ್ಲಿ ಹಾಜರಿದ್ದರು.



**ಭವಿಷ್ಯದಲ್ಲಿ ಮಾರುಕಟ್ಟೆಗೆ ಬರಲಿರುವ ಉಚಿತ ಕಂಪ್ಯೂಟರ್‌ನ್ನು ಶುಕ್ರವಾರ ಬೆಂಗಳೂರಿನಲ್ಲಿ ಏಷ್ಯಾಟೋಟಲ್ ಡಾಟ್ ನೆಟ್‌ನ ಅಧ್ಯಕ್ಷೆ ಜುಡಿ ಎಸ್ ಚೆನ್ ಪ್ರದರ್ಶಿಸುತ್ತಿರುವುದು.**



© Prajavani www.prajavani.com